# ಡಾ. ಬಾಬಾಸಾಹೇಬ ಅಂಬೇಡ್ಕರ್ ಮತ್ತು ಬೌದ್ಧ ಧರ್ಮ

**ಮಹಾಂತೇಶ ಸೀತಾರಾಮ ಕಾಂಬಳೆ**

ಸಂಶೋಧಕರು, ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

DOI: https://doi.org/10.5281/zenodo.17805890

## ABSTRACT:

ಡಾ. ಬಿ. ಆರ್. ಅಂಬೇಡ್ಕರ್ ಅವರು 20ನೇ ಶತಮಾನದ ಪ್ರಮುಖ ಯುಗಪ್ರವರ್ತಕರಾಗಿದ್ದು, ಭಾರತೀಯ ಸಮಾಜದ ಧಾರ್ಮಿಕ ಅಸಮಾನತೆ, ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಿರುದ್ಧ ತೀವ್ರ ಹೋರಾಟ ನಡೆಸಿದರು. ವೈದಿಕ ಧರ್ಮವು ಪ್ರತಿಪಾದಿಸಿದ ಶ್ರೇಣಿಕೃತ ವರ್ಣ ವ್ಯವಸ್ಥೆ ಮತ್ತು ಅಮಾನವೀಯ ಪದ್ಧತಿಗಳನ್ನು ಅವರು ಖಂಡಿಸಿದರು. ಹಿಂದೂ ಧರ್ಮದಲ್ಲಿ ಸಮಾನತೆ ಅಸಾಧ್ಯವೆಂದು ಅರಿತ ಡಾ. ಅಂಬೇಡ್ಕರ್ ಅವರು 1935ರಲ್ಲಿ ಯವಲಾ ಮತಾಂತರ ಘೋಷಣೆ ಮಾಡಿದರು. ಸುಮಾರು ಇಪ್ಪತ್ತು ವರ್ಷಗಳ ಅಧ್ಯಯನದ ನಂತರ, ಬೌದ್ಧ ಧರ್ಮದಲ್ಲಿರುವ ಸ್ವಾತಂತ್ರ್ಯ, ಸಹೋದರತ್ವ, ವೈಚಾರಿಕ ಪ್ರಜ್ಞೆ ಮತ್ತು ಸಮಾನತೆಯ ಪರಿಕಲ್ಪನೆಗೆ ಆಕರ್ಷಿತರಾದರು. ಅಂತಿಮವಾಗಿ, ಅಕ್ಟೋಬರ್ 14, 1956ರಂದು ನಾಗಪುರದಲ್ಲಿ ಐದು ಲಕ್ಷ ಅನುಯಾಯಿಗಳೊಂದಿಗೆ ಬೌದ್ಧ ಧಮ್ಮವನ್ನು ಸ್ವೀಕರಿಸಿ, 22 ಪ್ರತಿಜ್ಞೆಗಳನ್ನು ಬೋಧಿಸಿದರು. ಈ ಧರ್ಮಾಂತರವು ಭಾರತದಲ್ಲಿ ಧಾರ್ಮಿಕ ಕ್ರಾಂತಿಯನ್ನು ಉಂಟುಮಾಡಿತು ಮತ್ತು ಪ್ರಬುದ್ಧ ಭಾರತ ನಿರ್ಮಾಣಕ್ಕೆ ಕರೆ ನೀಡಿತು.

## KEYWORDS:

ಡಾ. ಬಿ. ಆರ್. ಅಂಬೇಡ್ಕರ್, ಬೌದ್ಧ ಧಮ್ಮ, ಧರ್ಮಾಂತರ, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ.

ಇಪ್ಪತ್ತನೇ ಶತಮಾನದ ಯುಗ ಪ್ರವರ್ತಕರಾದ ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಇತಿಹಾಸ, ತತ್ವಶಾಸ್ತ್ರ ಹಾಗೂ ಪತ್ರಿಕಾ ರಂಗದಲ್ಲಿ ಮಾಡಿದ ಸಾಧನೆಯು ಅವರ ಬೌದ್ಧಿಕ ಸಾಮರ್ಥ್ಯದ ಶಕ್ತಿಯನ್ನು ಕಾಣಬಹುದು. ಭಾರತೀಯ ಸಮಾಜದಲ್ಲಿ ಧರ್ಮಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ವೈದಿಕ ಧಾರ್ಮಿಕ ವ್ಯವಸ್ಥೆಯಲ್ಲಿ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಮೂಢನಂಬಿಕೆ ಹಾಗೂ ಅಸಮಾನತೆಯ ತೊಟ್ಟಿಲು ಆಗಿದೆ. ಈ ಅಸಮಾನತೆಗೆ ಧಾರ್ಮಿಕ ವ್ಯವಸ್ಥೆಯು ತಳಹದಿಯಾಗಿದೆ. ವರ್ಣ ವ್ಯವಸ್ಥೆಯನ್ನು ಪ್ರಬಲವಾಗಿ ಪ್ರತಿಪಾದಿಸಿದ ವೈದಿಕ ಧರ್ಮವು ಉದ್ಯೋಗದ ಆಧಾರಗಳ ಮೂಲಕ ವಂಶಪಾರಂಪರ್ಯವಾಗಿ ವಿಂಗಡಿಸುತ್ತಾ ಬಂದಿದೆ. ಈ ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಶ್ರೇಣಿಕೃತ ಪದ್ಧತಿಯನ್ನು ಒಳಗೊಂಡಿದೆ. ಆದ್ದರಿಂದ ವರ್ಣ ಹಾಗೂ ಜಾತಿ ವ್ಯವಸ್ಥೆಯನ್ನು ಬಿಟ್ಟು ವೈದಿಕ ಧರ್ಮವನ್ನು ನೋಡಲು ಸಾಧ್ಯವಿಲ್ಲ. ವರ್ಣ ಮತ್ತು ಜಾತಿ ಪದ್ಧತಿ ಮೂಲಕ ವೈದಿಕ ಧರ್ಮವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಅಸ್ಪೃಶ್ಯರನ್ನು ವಿವಿಧ ಹೆಸರುಗಳ ಮೂಲಕ ಗುರುತಿಸಲಾಗಿದೆ. ಅಂತ್ಯಜರು, ಪಂಚಮರು, ಅವರ್ಣೀಯರು, ದಲಿತರು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಈ ಜನರನ್ನು ಸಾವಿರಾರು ವರ್ಷಗಳಿಂದ ನಿಕೃಷ್ಟರನ್ನಾಗಿ ನೋಡಲಾಗಿದೆ. ಇಂತಹ ನಿಕೃಷ್ಟ, ಅಮಾನವೀಯ ಪದ್ಧತಿಗಳ ವಿರುದ್ಧ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಹೋರಾಟಗಳನ್ನು ರೂಪಿಸಿದ್ದರು. ಎರಡೂವರೆ ಸಾವಿರ ವರ್ಷಗಳ ನಿರಂತರ ಶೋಷಣೆಗಳ ವಿರುದ್ಧ ಡಾ. ಅಂಬೇಡ್ಕರರು ಪ್ರತಿರೋಧದ ನಿಲುವುಗಳನ್ನು ತಾಳುತ್ತಾರೆ.

1916ರಲ್ಲಿ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ಪ್ರೊ. ಗೋಲ್ಡನ್ ವೀಜರ್ ಏರ್ಪಡಿಸಿದ ಅಂತರಾಷ್ಟ್ರೀಯ ವಿಚಾರ ಗೋಷ್ಠಿಯಲ್ಲಿ 'ಕಾಸ್ಟ ಇನ್ ಇಂಡಿಯಾ' ಎಂಬ ಪ್ರಬಂಧದಲ್ಲಿ ಭಾರತದ ಜಾತಿ ಪದ್ಧತಿಯ ಕರಾಳ ಮುಖವನ್ನು ವೈಜ್ಞಾನಿಕವಾಗಿ ಚರ್ಚಿಸುತ್ತಾರೆ. ಬಾಲ್ಯದಲ್ಲಿ ಅನುಭವಿಸಿದ ಅಸ್ಪೃಶ್ಯತೆಯ ಪ್ರಸಂಗಗಳು, ವಿದೇಶದಿಂದ ಶಿಕ್ಷಣ ಪಡೆದು ಬಂದಂತಹ ಡಾ. ಅಂಬೇಡ್ಕರ ಅವರಿಗೆ ಬರೋಡಾ ಮಹಾರಾಜರ ಕಛೇರಿಯಲ್ಲಿ ಕೆಲಸ ಮಾಡುವಾಗ ಅನುಭವಿಸಿದ ಅಸ್ಪೃಶ್ಯತೆ ಘಟನೆ, ಮುಂಬೈನ ಸಿಡನ್‌ಹ್ಯಾಮ್ ಕಾಲೇಜನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರ ಹುದ್ದೆ ಸಿಕ್ಕಿತು. ಅಲ್ಲಿ ಅಸ್ಪೃಶ್ಯ ಪ್ರಾಧ್ಯಾಪಕರೆಂಬ ಕಾರಣಕ್ಕಾಗಿ ಸವರ್ಣೀಯ ವಿದ್ಯಾರ್ಥಿಗಳಿಂದ ಗೇಲಿ ಮಾಡಿದ ಪ್ರಸಂಗಗಳು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರನ್ನು ಮಾನಸಿಕವಾಗಿ ಗಟ್ಟಿಗೊಳಿಸಿ ಹೋರಾಟದ ರೂಪರೇಷೆಗಳನ್ನು ರೂಪಿಸಲು ಕಾರಣವಾದವು. ಅವುಗಳಲ್ಲಿ 1927ರಲ್ಲಿ ಜೀವ ವಿರೋಧಿಯಾದ ಮನುಸ್ಮೃತಿ ದಹನ, 1927ರಲ್ಲಿ ಮಹಾಡ್ ಕೆರೆ ಪ್ರವೇಶ, 1930ರಲ್ಲಿ ಕಾಳಾರಾಮ ಮಂದಿರ ಪ್ರವೇಶ ಮುಂತಾದ ಹೋರಾಟಗಳು ಬಹುಜನ ಸಮಾಜವನ್ನು ಎಚ್ಚರಿಸಿದ್ದವು. ಇಂತಹ ಅಸಮಾನತೆಯನ್ನು ಪ್ರತಿಪಾದಿಸುವ ಧರ್ಮವನ್ನು, ಧರ್ಮಗುರುಗಳನ್ನು ಡಾ. ಅಂಬೇಡ್ಕರ ಅವರು ಖಂಡಿಸುತ್ತಾರೆ.

ವೈದಿಕ ಧರ್ಮದಲ್ಲಿನ ಅಸಮಾನತೆಯನ್ನು ಖಂಡಿಸಿರುವ ಪರಂಪರೆ ದೊಡ್ಡದಿದೆ. ಅಂಥವರಲ್ಲಿ ಗೌತಮಬುದ್ಧ, ಬಸವಣ್ಣ, ಪುಲೆ ದಂಪತಿಗಳು, ನಾರಾಯಣಗುರು, ಪೆರಿಯಾರ ಪ್ರಮುಖರು. ಇವರುಗಳು ಧರ್ಮದ ಮೂಲವನ್ನು ಕೆದಕಿದರು. ಅದರಲ್ಲಿರುವ ಅನಿಷ್ಟ ಪದ್ಧತಿಗಳನ್ನು ಆಚರಣೆಗಳನ್ನು ಪ್ರಶ್ನೆ ಮಾಡಿದರು. ಆದಾಗ್ಯೂ ಯಾವುದೇ ಪರಿವರ್ತನೆ ಭಾರತೀಯ ಸಮಾಜದಲ್ಲಿ ಕಂಡು ಬರಲಿಲ್ಲ. ವರ್ಣ ವ್ಯವಸ್ಥೆಯ ತುತ್ತತುದಿಯಲ್ಲಿ ಬ್ರಾಹ್ಮಣರು ಇತರೇ ವರ್ಗಗಳನ್ನು ನಿಯಂತ್ರಿಸುತ್ತಿದ್ದರು. ಶೂದ್ರಾತಿಶೂದ್ರರು ಹುಟ್ಟಿನಿಂದ ಸಾಯುವವರೆಗೂ ಧರ್ಮದ ಚೌಕಟ್ಟಿನಲ್ಲಿಯೇ ಇರಬೇಕಿತ್ತು. ವೈದಿಕ ವ್ಯವಸ್ಥೆಯು ಈ ದೇಶದ ಮೂಲ ನಿವಾಸಿಗಳಾದ ಅಸ್ಪೃಶ್ಯರು, ಮಹಿಳೆಯರು, ಬುಡಕಟ್ಟು ಜನಾಂಗ ಹಾಗೂ ಬಹುಸಂಖ್ಯಾತ ಜನರನ್ನು ಮೂಲೆ ಗುಂಪಾಗಿ ಮಾಡಿ, ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಂಡರು. ಸಮಾಜದಲ್ಲಿನ ಧರ್ಮ ಹಾಗೂ ಜಾತಿ, ಲೇಪನ ಮಾಡಿ ದುಡಿಯದೇ ದೇಶದ ಚುಕ್ಕಾಣಿಯನ್ನು ಹಿಡಿದು ಮೂಲ ನಿವಾಸಿಗಳನ್ನು ಮೂಲೆಗುಂಪು ಮಾಡಿದರು. ಇಂತಹ ಸಾಮಾಜಿಕ ವ್ಯವಸ್ಥೆಯನ್ನು ಡಾ.ಅಂಬೇಡ್ಕರ್‌ರವರು ವಿರೋಧಿಸಿದರು.

ಕ್ರಾಂತಿ ಮತ್ತು ಪ್ರತಿಕ್ರಾಂತಿ ಪುಸ್ತಕದಲ್ಲಿ ಬ್ರಾಹ್ಮಣವಾದ ಮತ್ತು ಬೌದ್ಧವಾದ ನಡುವಿನ ತಾತ್ವಿಕ ಸಂಘರ್ಷವನ್ನು ಒತ್ತಿ ಹೇಳುತ್ತಾರೆ. ಅದೇ ಭಾರತೀಯ ಚರಿತ್ರೆಯಲ್ಲಿನ ಪ್ರಧಾನ ದ್ವಂದ್ವವಾಗಿದೆ ಎಂದು ತಿಳಿಸುತ್ತಾರೆ. ಪ್ರಾಚೀನ ಆರ್ಯ ಸಮಾಜವು ಪಂಗಡ ಸ್ವರೂಪವಾಗಿದ್ದು, ತುಂಬಾ ಹಿಂದುಳಿದ ಸಮಾಜವಾಗಿತ್ತು. ಆದರೆ ಬೌದ್ಧ ಧಮ್ಮ ಒಂದು ಕ್ರಾಂತಿಯನ್ನು ಪ್ರತಿನಿಧಿಸಿತ್ತು. ಅಂತೆಯೇ ಅದು ಮೌರ್ಯ ಸಾಮ್ರಾಟರ ಬೆಂಬಲವಿತ್ತು. ಮನು ಧರ್ಮಶಾಸ್ತ್ರದ ಅನ್ವಯ ರೂಪಿತಗೊಂಡ ಜಾತಿ ವ್ಯವಸ್ಥೆಯ ನಂತರ ಒಂದು ಪ್ರತಿಕ್ರಾಂತಿ ಸಂಭವಿಸಿತು. ಪರಿಣಾಮವಾಗಿ ಮೌರ್ಯರ ಕಾಲದಲ್ಲಿನ ಬ್ರಾಹ್ಮಣ ಪಾಳೆಗಾರಿಕೆ ಪ್ರಭುತ್ವವಾಗಿ ಜಾರಿಯಾಯಿತು. ಕ್ರಿ.ಶ. 185ರಲ್ಲಿ ಪುಷ್ಯಮಿತ್ರ ಶುಂಗ ಬೃಹದ್ರಥ ಮೌರ್ಯನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ, ತಂದ ನಂತರ ಕುತಂತ್ರದಿಂದ ಕೊಲೆ ಮಾಡಿ ಶುಂಗ ಸಾಮ್ರಾಜ್ಯವನ್ನು ಸ್ಥಾಪಿಸಿದ. ಇವನ ಆಡಳಿತದಲ್ಲಿ ಸುಮತಿ ಭಾರ್ಗವನಿಂದ ಮನುಸ್ಮೃತಿ ರಚಿಸಿ, ಮನು ಸಂವಿಧಾನವನ್ನು ಜಾರಿಗೊಳಿಸಿ ಶೂದ್ರಾತಿಶೂದ್ರರಿಗೆ ಹಾಗೂ ಮಹಿಳೆಯರಿಗೆ

ವಿದ್ಯೆ, ಸಂಪತ್ತು, ಅಧಿಕಾರದಿಂದ ವಂಚಿತರಾಗುವಂತೆ ಮಾಡಿತು. ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ದಹಿಸುವ ಮೂಲಕ ಹೊಸ ಸಮಾಜದ ನಿರ್ಮಾಣಕ್ಕೆ ಕಾರಣರಾದರು. ಇದು ಒಳಗೊಂಡಿರುವ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಮಹಿಳೆಯರ ಸ್ಥಾನಮಾನಗಳ ನಿರಾಕರಣೆ ವಿರುದ್ಧ ಧರ್ಮಾಂತರ ಚಳುವಳಿಯನ್ನು ಆರಂಭಿಸಿದರು.

ಧರ್ಮ ಕುರಿತು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ವಿಶೇಷವಾದ ಆಸಕ್ತಿಯನ್ನು ಇತ್ತು. ಅದಕ್ಕಾಗಿ ಮಾರ್ಕ್ಸವಾದಿಗಳ ಪ್ರಕಾರ ಧರ್ಮವನ್ನು ಒಂದು ಅಫೀಮು ಇದ್ದಂತೆ ಈ ವಾದವನ್ನು ಡಾ.ಅಂಬೇಡ್ಕರ ಒಪ್ಪುವುದಿಲ್ಲ. ಅದಕ್ಕಾಗಿ ಯಾವ ಧರ್ಮದಲ್ಲಿ ಒಬ್ಬ ವ್ಯಕ್ತಿಗೆ ಮಹತ್ವವಿಲ್ಲವೋ ಅವನಿಗೆ ಸ್ವಾತಂತ್ರ್ಯವಿಲ್ಲವೋ ಆ ಧರ್ಮವನ್ನು ಒಪ್ಪಲಾಗದು ಎನ್ನುತ್ತಾರೆ. ಮುಂದುವರೆದು ಯಾವ ಧರ್ಮದಲ್ಲಿ ಒಂದು ವರ್ಗ ಜ್ಞಾನವನ್ನು ಸಂಪಾದಿಸುವ ಹಕ್ಕನ್ನು ಹೊಂದಿದೆಯೋ, ಮತ್ತೊಂದು ವರ್ಗಕ್ಕೆ ಆಯುಧ ಹಿಡಿಯಲು ಅವಕಾಶ ನೀಡಿದೆಯೋ, ಮೂರನೇ ವರ್ಗವು ಕೇವಲ ವ್ಯಾಪಾರ ಮಾಡಲು, ನಾಲ್ಕನೇ ವರ್ಗವು ಈ ಮೂರು ವರ್ಗಗಳ ಸೇವೆ ಮಾಡುವುದನ್ನು ಹೊಂದಿದೆಯೋ ಆ ಧರ್ಮವನ್ನು ಒಪ್ಪುವುದಿಲ್ಲವೆಂದು ಹೇಳುತ್ತಾರೆ. ಇದರ ಪೂರಕವಾಗಿ 1929ರಲ್ಲಿ 'ಜಲಗಾಂವ್'ನಲ್ಲಿ ಮತಾಂತರದ ಮುನ್ಸೂಚನೆಯನ್ನು ನೀಡಿದ್ದರು. ಇದರಿಂದ ನಾಸಿಕ್ ನ 12 ಜನ ಮಹಾರ್ ಅವರು ಇಸ್ಲಾಂ ಧರ್ಮವನ್ನು ಸೇರಿದ್ದರು. ಆಗ ಬಾಬಾಸಾಹೇಬರು ನಾನು ಅಂತಿಮ ತೀರ್ಮಾನಕ್ಕೆ ಬರುವವರೆಗೆ ಯಾರು ಆತುರದ ನಿರ್ಧಾರ ತೆಗೆದುಕೊಳ್ಳದಂತೆ ಎಚ್ಚರಿಕೆಯ ಕರೆ ನೀಡಿದರು. ಅಲ್ಲದೆ ನಮ್ಮನ್ನು ಮಾನವರನ್ನಾಗಿ ಕಾಣುವ ಯಾವುದೇ ಧರ್ಮವನ್ನು ಸೇರಿಕೊಳ್ಳುವ ಬಗ್ಗೆ ನಾವು ಆಲೋಚನೆ ಮಾಡುವುದು ಅವಶ್ಯಕವೆಂದು ತಿಳಿಸಿದರು.

ಡಾ. ಬಾಬಾಸಾಹೇಬರು ಅಂಬೇಡ್ಕರ್ ಅವರು ಧರ್ಮಾಂತರ ಘೋಷಣೆ ಮಾಡಿದಾಗ ಅಮೃತ್‌ಸರ ಸುವರ್ಣ ದೇವಾಲಯದ ಉಪಾಧ್ಯಕ್ಷರಾದ ಸರ್ದಾರ್ ದಲಿಪಸಿಂಗ್ ದೋವಾಖಿಯಾ ಅವರು ಸಿಖ್ ಧರ್ಮವನ್ನು ಸೇರಿದರೆ ದಲಿತಗೆ ಸಮಾನ ಅವಕಾಶವನ್ನು ಮತ್ತು ಸೌಲಭ್ಯವನ್ನು ಒದಗಿಸುವ ಭರವಸೆ ನೀಡಿದ್ದರು. ಅದಲ್ಲದೇ ಸಿಖ್ ಧರ್ಮದ ಧರ್ಮಗುರುಗಳು ಸಿಖ್ ಧರ್ಮವನ್ನು ಸ್ವೀಕರಿಸಿದ್ದರೆ ಪಟಿಯಾಲ ರಾಜ್ಯದ ಮುಖ್ಯಮಂತ್ರಿನ್ನಾಗಿ ಮಾಡುವುದಾಗಿ ಹೇಳಿದರು. ಎಂ.ಕೆ.ಎಲ್. ಗೌಬಾರ, ಪೀರ ಜಮಾತ ಅಲಿ ಅವರು ಇಸ್ಲಾಂ ಧರ್ಮಕ್ಕೆ ಸೇರಲು ಮನವಿ ಮಾಡಿಕೊಂಡರು. ಹೈದ್ರಾಬಾದಿನ ನಿಜಾಮನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆ ಐದು ಕೋಟಿ ರೂಪಾಯಿಗಳನ್ನು ಹಾಗೂ ತನ್ನ ಆಸ್ಥಾನದಲ್ಲಿ ಉನ್ನತ ಹುದ್ದೆ ನೀಡುವುದಾಗಿ ತಿಳಿಸುತ್ತಾನೆ. ಕ್ರೈಸ್ತ ಧರ್ಮದ ಮುಂಬೈನ ಮೆಥಾಪ್ಲಿಸ್ ಎಪಿಸ್ಕೋಪಲ್ ಚರ್ಚಿನ ಬಿಷಪ ಬ್ರಿಟನ ಥೋಬಾರ್ನ ಬಾಡ್ಗೆ, ಬಿಷಪ ಜೆ.ಡಬ್ಲ್ಯೂಡಿಕೆಡ್ ಮತ್ತು ಈಸ್ವ ಸ್ವಾರೆಯುಗ್ಲಿ ಜೋನ್ಸ್ ಧರ್ಮಗುರುಗಳು ಕೂಡಾ ಕ್ರಿಶ್ಚಿಯನ್ ಧರ್ಮಕ್ಕೆ ಬಂದರೆ ದಲಿತ ಸಮುದಾಯದ ಕಲ್ಯಾಣದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಾಗಿ ತಿಳಿಸಿದರು. ಆದರೆ ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಸುಮಾರು ಇಪ್ಪತ್ತು ವರ್ಷಗಳವರೆಗೆ ಜಗತ್ತಿನ ವಿವಿಧ ಧರ್ಮಗಳು–ಧರ್ಮಗ್ರಂಥಗಳನ್ನು, ಸಂಪ್ರದಾಯ–ಆಚರಣೆಗಳನ್ನು ಆಳವಾಗಿ ಅಧ್ಯಯನ ಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರುತ್ತಾರೆ.

**1935ರಲ್ಲಿ ಯೆವಲಾ (ಇಯೋಲಾ) ಮತಾಂತರ ಘೋಷಣೆ:**

ಡಾ.ಬಾಬಾಸಾಹೇಬ ಅಂಬೇಡ್ಕರ ಅವರು ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಯವೋಲಾ ನಲ್ಲಿ ಆಯೋಜಿಸಿದ ಸಮ್ಮೇಳನಕ್ಕೆ ಭಾರತದ ವಿವಿಧ ಪ್ರದೇಶಗಳಿಂದ ಹತ್ತು

ಸಾವಿರಕ್ಕೂ ಹೆಚ್ಚು ಅನುಯಾಯಿಗಳು ಸೇರಿಕೊಂಡರು. ಈ ಒಂದು ಸಮ್ಮೇಳನದಲ್ಲಿ ಡಾ. ಬಾಬಾಸಾಹೇಬರು ಒಂದು ಘಂಟೆಗೂ ಹೆಚ್ಚು ಕಾಲ ಜನರನ್ನು ಉದ್ದೇಶಿಸಿ ಮಾತನಾಡಿದ್ದರು. ನಾನು ಧರ್ಮಾಂತರ ಕುರಿತು ಹತ್ತು ವರ್ಷಗಳಿಂದ ಆಲೋಚನೆ ಮಾಡುತ್ತಲೇ ಬಂದಿದ್ದೇನೆ. ಹಿಂದೂ ಧರ್ಮದಲ್ಲಿ ಅನಿಷ್ಟ ಆಚರಣೆಗಳನ್ನು ತೊಲಗಿಸಲು ಪ್ರಯತ್ನಿಸಿದೆ ಆದರೆ ಅದನ್ನು ಸವರ್ಣೀಯರ ಮನಸ್ಸು ಒಪ್ಪಲಿಲ್ಲ. ಅದಕ್ಕಾಗಿ ಅದು ಅಸಾಧ್ಯವೆಂದು ಅರಿತುಕೊಂಡಿದ್ದೇನೆ. ಅದಕ್ಕಾಗಿ ನಾವು ಹೊಸ ಮತವನ್ನು ಸ್ವೀಕರಿಸುವಾಗ ಜಾಗೃತೆಯನ್ನು ಬೆಳೆಸಿಕೊಳ್ಳಲು ಹೇಳಿದರು. ಮತಾಂತರ ಕುರಿತು ಆಳವಾದ ಅಧ್ಯಯನ ಅವಶ್ಯಕವೆಂದು ವಿವರಿಸಿದರು. ಯಾವುದೇ ಬಾಹ್ಯ ಒತ್ತಡಕ್ಕೂ, ಆಮಿಷಕ್ಕೂ, ಅಭಿಮಾನಕ್ಕೂ ಧರ್ಮವನ್ನು ಸ್ವೀಕರಿಸಬಾರೆಂದು ತಿಳಿಸಿದರು. ಅದೇ ಸಮ್ಮೇಳನದಲ್ಲಿ "ನಾನು ಆಕಸ್ಮಿಕವಾಗಿ ಹಿಂದೂ ಅಸ್ಪೃಶ್ಯನಾಗಿ ಜನಿಸಿದೆ. ಹುಟ್ಟು ನನ್ನ ಕೈಯಲ್ಲಿರಲಿಲ್ಲ. ಆದರೆ ಯಾವುದೇ ಕಾರಣಕ್ಕೂ ನಾನು ಹಿಂದೂ ಅಸ್ಪೃಶ್ಯನಾಗಿ ಮಾತ್ರ ಸಾಯಲಾರೆ. ಅದು ನನ್ನ ಕೈಯಲ್ಲಿದೆ"[1] ಎಂಬ ನಿರ್ಧಾರವನ್ನು ಮಾಡಿದರು. ಈ ಮಾತು ಇಡೀ ಜಗತ್ತನ್ನೆ ಎಚ್ಚರಿಸಿತು. ಇದರಿಂದ ತಮ್ಮ ಧರ್ಮದ ಭವಿಷ್ಯ ಕತ್ತಲಕೂಪಕ್ಕೆ ಜಾರುತ್ತದೆ ಎಂಬ ಭಾವನೆ ಹಿಂದೂಗಳಲ್ಲಿ ಮೂಡಿತು. ಕೇಳ್ಕರ್, ಭೋಪಟ್ಕರ್, ಚಿತ್ತಾವ ಹಾಗೂ ಪ್ರೊ.ಎಸ್.ಎಂ. ಮಾಟೆಯವರು ಡಾ.ಬಾಬಾಸಾಹೇಬ ಅಂಬೇಡ್ಕರ ಅವರನ್ನು ಮತಾಂತರದಿಂದ ಹಿಂದೆ ಸರಿಯುವಂತೆ ವಿನಂತಿಸಿಕೊಂಡರು.

ಇಟಲಿಯ ಬೌದ್ಧ ಬಿಕ್ಕು ಲೋಕನಾಥ ಎಂಬುವರು 1936 ಜೂನ್ 10ರಂದು ಮುಂಬೈನ ರಾಜಗೃಹಕ್ಕೆ ಭೇಟಿ ನೀಡಿ ಡಾ. ಅಂಬೇಡ್ಕರ ಅವರಿಗೆ ಬೌದ್ಧ ಧಮ್ಮಕ್ಕೆ ಬರಲು ಆಹ್ವಾನಿಸಿದರು. ಆದರೆ ಡಾ.ಅಂಬೇಡ್ಕರ್ ಅವರು ಯಾವುದೇ ಭರವಸೆಯನ್ನು ನೀಡಲಿಲ್ಲ. 1940 ನಂತರ ಡಾ.ಬಾಬಾಸಾಹೇಬರಿಗೆ ಬೌದ್ಧ ಧಮ್ಮದ ಕಡೆ ಒಲವು ಮೂಡಿತು. ಇದರಿಂದ ಡಾ.ಬಾಬಾಸಾಹೇಬರ ಅಂಬೇಡ್ಕರ್ ಅವರು ಬೌದ್ಧ ಧಮ್ಮದ ಸ್ಥಿತಿಗತಿಯನ್ನು ಅರಿತುಕೊಂಡರು. ಸ್ವದೇಶಿ ಧಮ್ಮವಾದ ಬೌದ್ಧ ಧಮ್ಮವು ಈ ನೆಲದಿಂದ ಹೇಗೆ ದೂರವಾಯಿತೆಂದು ಅಧ್ಯಯನಗಳ ಮೂಲಕ ಅರಿತುಕೊಂಡರು. ಇದರಿಂದ ಡಾ.ಅಂಬೇಡ್ಕರ ಅವರು 'ಪುರೋಹಿತಶಾಹಿಗಳಿಗೂ ಮತ್ತು ಬೌದ್ಧ ಧಮ್ಮೀಯರ ಮಧ್ಯೆ ನಿರಂತರವಾಗಿ ನಡೆದ ಹೋರಾಟದ ಪ್ರಸಂಗವನ್ನು ಭಾರತದ ಇತಿಹಾಸವೆಂದು ಹೇಳುತ್ತಾರೆ'. ಬುದ್ಧನ ಮಾನವೀಯ ಅಂತಃಕರಣ ಹಾಗೂ ಧಮ್ಮ ಒಳಗೊಂಡಿರುವ ಪ್ರಜ್ಞೆ, ಕರುಣ, ಮೈತ್ರಿ ಹಾಗೂ ಸಮತಾ ಚಿಂತನೆಗಳು ಡಾ.ಬಾಬಾಸಾಹೇಬ ಅಂಬೇಡ್ಕರ ಅವರನ್ನು ಆಕರ್ಷಿಸಿದವು. ಇದರಿಂದ ಅವರ ಅನುಯಾಯಿಗಳಿಗೆ ಬೌದ್ಧ ಧಮ್ಮವನ್ನು ಸೇರಿಕೊಳ್ಳಲು ಕರೆ ಕೊಟ್ಟರು. 14 ಅಕ್ಟೋಬರ್ 1956ರಂದು ಅಶೋಕ ವಿಜಯ ದಶಮಿಯ ದಿನದಂದು ತಮ್ಮ ಐದು ಲಕ್ಷ ಅನುಯಾಯಿಗಳೊಂದಿಗೆ ಬೌದ್ಧ ಧಮ್ಮವನ್ನು ಸ್ವೀಕರಿಸಿದರು. ಬೌದ್ಧ ಬಿಕ್ಕುವಾದ ಮನಸ್ಥವಿರ ಚಂದ್ರಮಣಿ ಅವರಿಂದ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಡಾ.ಅಂಬೇಡ್ಕರ ಅವರು ನಾಗಪೂರದಲ್ಲಿ ಸೇರಿರುವ ತಮ್ಮ ಅನುಯಾಯಿಗಳಿಗೆ 22 ಪ್ರತಿಜ್ಞಾ ವಿಧಿಗಳನ್ನು ಬೋಧಿಸುವ ಮೂಲಕ ಬೌದ್ಧ ಧಮ್ಮಕ್ಕೆ ಧರ್ಮಾಂತರವಾದರು.

ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ಬೌದ್ಧ ಧಮ್ಮದಲ್ಲಿನ ಸಮಾನತೆಯ ಪರಿಕಲ್ಪನೆ ತುಂಬಾ ಪ್ರಭಾವ ಬೀರಿತು. ಭಾರತದಲ್ಲಿ ಮುಸ್ಲಿಂ, ಸಿಖ್, ಜೈನ, ಕ್ರಿಶ್ಚಿಯನ್, ಪಾರ್ಸಿ ಮುಂತಾದ ಧರ್ಮಗಳು ಇದ್ದರೂ ಕೂಡಾ ಬಾಬಾಸಾಹೇಬರಿಗೆ ಬೌದ್ಧ ಧಮ್ಮದಲ್ಲಿನ ಸ್ವಾತಂತ್ರ್ಯ ಹಾಗೂ ಸಹೋದರತ್ವ ಹಾಗೂ ಮೇಲು-ಕೀಳು ಎಂಬ ಭೇದವಿಲ್ಲದೆ ಎಲ್ಲರನ್ನೂ ಸಮಾನರಾಗಿ ಕಾಣುವ ಅಂಶವು ಹೆಚ್ಚು ಪ್ರಭಾವ ಬೀರಿತು. ಏಷ್ಯಾ ಖಂಡವನ್ನು ಬಹುಪಾಲು

ಆಳ್ವಿಕೆ ಮಾಡಿದ ಸಾಮ್ರಾಟ್ ಅಶೋಕ ಚಕ್ರವರ್ತಿಯು ಬುದ್ಧ ವಿಚಾರಧಾರೆಗೆ ಮಾರು ಹೋಗಿ ಬೌದ್ಧ ಧಮ್ಮವನ್ನು ಅನುಸರಿಸಿದನು. ಬುದ್ಧ ಧರ್ಮದಲ್ಲಿನ ವೈಚಾರಿಕ ಪ್ರಜ್ಞೆ, ನೈತಿಕತೆ ಹಾಗೂ ನ್ಯಾಯ ಸಿದ್ಧಾಂತಗಳ ಆಧಾರದ ಮೇಲೆ ಆಳಿದ್ದು ಡಾ.ಬಾಬಾಸಾಹೇಬರಿಗೆ ಅಂಬೇಡ್ಕರ ಅವರನ್ನು ಅತಿ ಆಕರ್ಷಿಸಿತು. ಇದರಿಂದ ಡಾ. ಅಂಬೇಡ್ಕರ ಅವರು ಬೌದ್ಧ ಧಮ್ಮವನ್ನು ಸ್ವೀಕರಿಸಿದರು. ಮುಂದೆ 1956ರಲ್ಲಿ ನೇಪಾಳದ ಕಠ್ಮಂಡುನಲ್ಲಿ ನಡೆದ ವಿಶ್ವ ಬೌದ್ಧ ಸಮ್ಮೇಳನಕ್ಕೆ ಅತಿಥಿಯಾಗಿ ಭಾಗವಹಿಸಿ 'ಬುದ್ಧ ಮತ್ತು ಕಾರ್ಲ್ ಮಾರ್ಕ್ಸ್' ಎಂಬ ವಿಷಯ ಕುರಿತು ಮಾತನಾಡುತ್ತಾರೆ. 1956ರಲ್ಲಿ 'ಬುದ್ಧ ಮತ್ತು ಅವನ ಧಮ್ಮ' ಪುಸ್ತಕವನ್ನು ಬರೆಯುವ ಮೂಲಕ ನವಯಾನ ಬೌದ್ಧ ಧಮ್ಮಕ್ಕೆ ಒಂದು ಚೌಕಟ್ಟು ಒದಗಿಸುವ ಮೂಲಕ ಭಾರತದಲ್ಲಿ ಧಾರ್ಮಿಕ ಕ್ರಾಂತಿಯನ್ನು ಮಾಡಿದರು. ಡಾ. ಬಾಬಾಸಾಹೇಬ ಅಂಬೇಡ್ಕರ ಅನುಯಾಯಿಗಳಾದ ನಾವು ಬೌದ್ಧತ್ವ ಸ್ವೀಕರಿಸುವ ಮೂಲಕ ಪ್ರಬುದ್ಧ ಭಾರತವನ್ನು ನಿರ್ಮಿಸಬೇಕಿದೆ.

**ಅಡಿ ಟಿಪ್ಪಣಿ:**

1. Eleanor Zelliot : Ambedkar World Making New India, p–147

**ಪರಾಮರ್ಶನ ಗ್ರಂಥಗಳು:**


1. ಡಾ.ಎಚ್.ಟಿ.ಪೋತೆ : ಡಾ. ಅಂಬೇಡ್ಕರ್: ದಲಿತ ಚಳುವಳಿ.
2. ಮಾನೆ ದಯಾನಂದ : ಬಾಬಾಸಾಹೇಬ ಅಂಬೇಡ್ಕರ್ ಮತ್ತು ದಲಿತ ಚಳುವಳಿ, ಡಾ.ಬಿ.ಆರ್.ಅಂಬೇಡ್ಕರ್ ರಿಸರ್ಚ್ ಸೆಂಟರ್, ಬೆಂಗಳೂರು
3. ಎನ್.ಮಹೇಶ : ಡಾ.ಬಿ.ಆರ್.ಅಂಬೇಡ್ಕರ್, ಪ್ರಬುದ್ಧ ಪ್ರಕಾಶನ, ಮೈಸೂರು, 2014
4. ಡಾ.ಜಿ.ಬಿ.ನಂದನ : ಡಾ.ಬಿ.ಆರ್.ಅಂಬೇಡ್ಕರ ಅಸ್ಪೃಶ್ಯತೆಯ ವಿಮೋಚನೆ, ಪ್ರಸಾರಾಂಗ ಧಾರವಾಡ, 2006.
5. ಡಾ.ಬಿ.ಆರ್.ಅಂಬೇಡ್ಕರ, ಹಿಂದೂ ಧರ್ಮದ ಒಗಟುಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
6. ಡಾ.ಬಾಬಾಸಾಹೇಬ ಅಂಬೇಡ್ಕರ ಅವರ ಬರಹ ಮತ್ತು ಭಾಷಣಗಳು (1ರಿಂದ4 ಸಂಪುಟಗಳು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
7. ಚಿನ್ನಸ್ವಾಮಿ ಎನ್. ಸೋಸಲೆ : ಅಂಬೇಡ್ಕರ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ, ಯಾಜಿ ಪ್ರಕಾಶನ, ಹೊಸಪೇಟೆ, 2012
8. ಸದಾಶಿವ ಮರ್ಜಿ : ನಾನು ಹಿಂದೂ ಆಗಿ ಸಾಯಲಾರೆ ಡಾ.ಅಂಬೇಡ್ಕರ್, ಲಡಾಯಿ ಪ್ರಕಾಶನ, ಗದಗ, 2017.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.